# ಅನಿಕೇತನ

# ANIKETANA

ಡಾ ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ

Dr. Manmohan Singh Bengaluru City University

ಆಗು ನೀ ಅನಿಕೇತನ

BE BOUNDLESS

ಸಂಪುಟ 01 | ಸಂಚಿಕೆ 02 | ಬೆಂಗಳೂರು | December 2025 | ಪುಟ 01

Monthly Campus Journal by the Department of Mass Communication and Journalism. (For Private Circulation Only)

# ಸಂವಿಧಾನ ದಿನಾಚರಣೆ–ಸಂವಿಧಾನ ಸೈನಿಕರ ಸಮಾವೇಶ

## ಸಂಪತ್ತಿನ ಕೇಂದ್ರೀಕರಣಕ್ಕೆ ಕಡಿವಾಣ ಅಗತ್ಯ– ಕಾನೂನು ಸಚಿವರ ಅಭಿಮತ

ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ ಹಾಗೂ ರಾಜ್ಯ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ನವೆಂಬರ್ 26 ರಂದು ಸಂವಿಧಾನ ದಿನಾಚರಣೆ ಮತ್ತು ಸಂವಿಧಾನ ಸೈನಿಕರ ಸಮಾವೇಶವನ್ನು ಏರ್ಪಡಿಸಲಾಗಿತ್ತು.

ಸಮಾರಂಭವನ್ನು ಉದ್ಘಾಟಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಎಚ್.ಕೆ. ಪಾಟೀಲ್ ಭಾರತ ಸಂವಿಧಾನದ 4ನೇ ದ್ವಿಭಾಷಾ ಆವೃತ್ತಿಯನ್ನು ಲೋಕಾರ್ಪಣೆ ಮಾಡಿ ಸಂವಿಧಾನ ಪೀಠಿ–ಕೆಯ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.

ಸಂವಿಧಾನ ಕೇವಲ ಪೂಜಿಸುವ ಧರ್ಮಗ್ರಂಥವಾಗಿರದೆ ಸಮಸ್ತ ಭಾರತೀಯ ಪ್ರಜೆಗಳ ಬದುಕನ್ನು ಉತ್ತಮ ದರ್ಜೆಗೆ ಬದಲಾಯಿಸುವ ಪರಿಣಾಮಕಾರಿ ಅಸ್ತ್ರವಾಗಿದೆ ಎಂದು ಕಾನೂನು ಸಚಿವರು ವಿಶ್ಲೇಷಿಸಿದರು.



ಸಂವಿಧಾನ ದಿನಾಚರಣೆ ಸಮಾರಂಭದಲ್ಲಿ ಕಾನೂನು ಸಚಿವರಾದ H.K. ಪಾಟೀಲ್, ಕುಲಪತಿಗಳಾದ ಪ್ರೊ ರಮೇಶ್ B, ಇತರೆ ಗಣ್ಯರು ಪಾಲ್ಗೊಂಡರು.

ಸಂವಿಧಾನ ಜಾರಿಯಾದ 75 ವರ್ಷಗಳ ಅವಧಿಯಲ್ಲಿ ದೇಶದಲ್ಲಿ ಸಂಪತ್ತಿನ ಕೇಂದ್ರೀಕರಣ ಮೇರೆಮೀ–ರಿದ್ದು ಡಾ. ಅಂಬೇಡ್ಕರ್ ರವರ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಗುರಿ ಸಾಧನೆಗೆ ಯುವಶಕ್ತಿ ಪಣ ತೊಡಬೇಕೆಂದು ಸಚಿವರು ಪ್ರೇರೇಪಿಸಿದರು.

ಸಂವಿಧಾನದ 309ನೇ ವಿಧಿಯನ್ನು ಉಲ್ಲಂಘಿಸಿ ಕೇಂದ್ರ ಮತ್ತು ರಾಜ್ಯಗಳ ಸರ್ಕಾರಿ ಉದ್ಯೋಗಗಳಿಗೆ ಅರ್ಹತೆ ಮತ್ತು ಮೀಸಲಾತಿ ಮಾನದಂಡಗಳನ್ನು ನಿರ್ಲಕ್ಷಿಸಿ ಹೊರಗುತ್ತಿಗೆ ಮೂಲಕ ನೇಮಕ ಮಾಡುವ ಪದ್ಧತಿಯನ್ನು ಅವರು ಪ್ರಬಲವಾಗಿ ವಿರೋಧಿಸಿದರು.

ಕಳೆದೆರಡು ದಶಕಗಳಿಂದ ಸಂವಿಧಾನದ ಆಶಯಗಳಿಗೆ ವ್ಯತಿರಿಕ್ತವಾಗಿ ಇಂತಹ ಅಪಚಾರ ನಡೆಯುತ್ತಿದ್ದು ಆದಷ್ಟು ಬೇಗ ಇದನ್ನು ಕೊನೆಗಾಣಿಸಲು ರಾಜ್ಯ ಸರ್ಕಾರ ಕಟಿಬದ್ಧವಾಗಿದೆ ಎಂದು ಕಾನೂನು ಸಚಿವರು ನುಡಿದರು.

ಪ್ರಾಸ್ತಾವಿಕ ಭಾಷಣ ಮಾಡಿದ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ನಿರ್ದೇಶಕರಾದ ಪ್ರೊ.ಸಿ. ಎಸ್.ಪಾಟೀಲ್ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ರಕ್ಷಣೆಯಲ್ಲಿ ಸಂವಿಧಾನ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ವಿವರಿಸಿದರು.

ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ರಮೇಶ್ ಬಿ. ಮಾತನಾಡಿ ಸಂವಿಧಾನವನ್ನು ಗಂಭೀರವಾಗಿ ಓದಿ ಅರ್ಥೈಸಿಕೊಂಡು ದೇಶದ ಭವಿಷ್ಯವನ್ನು ಸಂರಕ್ಷಿಸುವಂತೆ ವಿದ್ಯಾರ್ಥಿಗಳಿಗೆ ಮನವಿ ಮಾಡಿದರು.

ಸಂಸದೀಯ ವ್ಯವಹಾರ ಮತ್ತು ಶಾಸನ ರಚನೆ ಇಲಾಖೆಯ ಕಾರ್ಯದರ್ಶಿ ಜಿ. ಶ್ರೀಧರ್, ಭಾಷಾಂತರ ನಿರ್ದೇಶನಾಲಯದ ನಿರ್ದೇಶಕರಾದ ಎಂ.ವೆಂಕಟೇಶ್, ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ. ಕೆ.ಆರ್. ಜಲಜಾ, ಕುಲಸಚಿವರಾದ ನವೀನ್ ಜೋಸೆಫ್, ಕುಲಸಚಿವ (ಮೌಲ್ಯಮಾಪನ) ರಮೇಶ್ ಬಿ. ಕುಡೇನಟ್ಟಿ , ವಿತ್ತಾಧಿಕಾರಿಗಳಾದ ಎಂ.ವಿ. ವಿಜಯಲಕ್ಷ್ಮಿ, ಸಿಂಡಿಕೇಟ್ ಸದಸ್ಯರಾದ , ಕೆ.ಪಿ.ಪಾಟೀಲ್, ಡಾ.ಎಚ್.ಕೃಷ್ಣರಾಮ್, ಶಿಲ್ಪಶ್ರೀ ವಿ.ಎನ್. ಉಪಸ್ಥಿತರಿದ್ದರು.

ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ ಸಂಶೋಧನಾ ಮುಖ್ಯಸ್ಥರಾದ ಡಾ. ರೇವಯ್ಯ ಒಡೆಯರ್ ವಂದನಾರ್ಪಣೆ ಮಾಡಿದರು. ಸಿಂಡಿಕೇಟ್ ಸದಸ್ಯರಾದ ಆಯೇಷಾ ಫರ್ಜಾನಾ ಕಾರ್ಯಕ್ರಮ ನಿರೂಪಿಸಿದರು. ಕನ್ನಡ ವಿಭಾಗದ ಡಾ. ಮಂಜು ಸಿ.ಎನ್. ಹಾಗೂ ಪ್ರಾಣಿಶಾಸ್ತ್ರ ವಿಭಾಗದ ಡಾ. ಪ್ರಭು ನೇತೃತ್ವದ ತಂಡದವರು ನಾಡಗೀತೆ ಮತ್ತು ಸಂವಿಧಾನ ಜಾಗೃತಿ ಗೀತೆಗಳನ್ನು ಪ್ರಸ್ತುತಪಡಿಸಿದರು.

# International Conference at Centre for Global Languages

## Language, Culture and World Peace: A Dialogue for a Peaceful World

**-Shravya Mouli**

The Centre for Global Languages, in collaboration with IQAC and the Faculty of Arts hosted an international conference on "Language, Culture and World Peace: A Dialogue for a Peaceful World" on November 27-28, 2025. The event transformed our campus into a vibrant intellectual space, bringing together scholars, educators, diplomats, artists, and students from multiple countries. The inaugural session at Jnana Jyothi Auditorium featured distinguished speakers including Prof. Fady Fadel (Dean & CAO, ESAIP Group La Salle, France), Chief Guest Mr. JigmeyTsultrim (Additional Secretary & CRO, Central Tibetan Administration), and Prof. Rajendra Chenni (Kuvempu University). Guests of honour Mr. Jean-Marc Dépierre (Director, Alliance Française de Bengaluru) and Dr. Michael Heinst (Director, Goethe-Institut/Max Mueller Bhavan) added international perspectives to the proceedings. Hon'ble Vice-Chancellor Prof. Ramesh B delivered the presidential remarks, connecting the university's vision with global peace aspirations.



International Conference inaugural function held at JJ Auditorium, BCU.

The conference featured seven special lectures exploring crucial themes—from trauma-sensitive communication by Dr. (Col.) K. M. Harikrishnan to Dr. Anubha Jain's insights on media and geopolitics. Prof. Francis Rousseaux's lecture on AI and computational ethics particularly resonated with the audience, generating lively post-session discussions. The evenings came alive with cultural performances near the BCU Clock Tower, followed by a gala dinner hosted by the Vice-Chancellor, fostering informal dialogue and cross-cultural camaraderie. The conference was concluded on Friday with the valedictory function. The conference successfully affirmed that peace is constructed daily through communication, culture, and shared humanity, igniting conversations and collaborations that will continue to resonate across borders and disciplines.

## National Press Day

**-Bhavana M V, II MCJ**

National Press Day was celebrated at the Press Club of Bengaluru on 17th November. Chief Guest UT Khader, Speaker of the Karnataka Legislative Assembly, stressed the relationship between journalism and politics, noting that both must act responsibly. He warned against presenting personal opinions as news and urged journalists to separate facts from views. Senior journalist Nupur Basu expressed concern over declining media credibility. Karnataka Media Academy President Ayesha Khanam emphasised the media's role as the fourth pillar of democracy. BCU MCJ Students and Faculty members attended the program.

# ಕರ್ನಾಟಕ ರಾಜ್ಯೋತ್ಸವ – ಅನಿಕೇತನ ಪತ್ರಿಕೆ ಬಿಡುಗಡೆ

**–ಮೋಹನ್ ವಿ, MCJ ದ್ವಿತೀಯ**

ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ರಾಜಾಜಿ ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ 70ನೇ ಕರ್ನಾಟಕ ರಾಜ್ಯೋತ್ಸವದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಿರಿಯ ಪತ್ರಕರ್ತರು ಮತ್ತು ಲೇಖಕರಾದ ಡಾ.ಆರ್.ಪೂರ್ಣಿಮಾ ಬಿಸಿಯು ಸಮೂಹ ಸಂವಹನ ವಿಭಾಗದ ಉಸ್ತುವಾರಿಯ 'ಅನಿಕೇತನ' ಮಾಸ ಪತ್ರಿಕೆಯ ಪ್ರಥಮ ಸಂಚಿಕೆಯನ್ನು ಬಿಡುಗಡೆ ಮಾಡಿದರು.

ಕನ್ನಡ ಪತ್ರಿಕೆಗಳು ನಾಡು ನುಡಿಯ ಏಳಿಗೆಗೆ ಅತ್ಯಮೂಲ್ಯ ಕಾಣಿಕೆ ನೀಡಿದ್ದು ಕರ್ನಾಟಕ ರಾಜ್ಯದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ ಎಂದು ಅವರು ವಿಶ್ಲೇಷಿಸಿದರು. ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘದ 'ಪ್ರಬುದ್ಧ ಕರ್ನಾಟಕ' ಕನ್ನಡ ಸಾಹಿತ್ಯದ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದ್ದನ್ನು ಅವರು ಇದೇ ವೇಳೆ ಸ್ಮರಿಸಿದರು. ಬಂಡಾಯ ಸಾಹಿತ್ಯ ಮತ್ತು ದಲಿತ ಸಾಹಿತ್ಯ ಚಳವಳಿಗಳಿಗೆ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗ ಮೂಲ ಸೆಲೆಯಾಗಿ–ತ್ತೆಂದು ಅವರು ವಿವರಿಸಿದರು.

**ಶೀಘ್ರವೇ ಪ್ರಸಾರಾಂಗ ಪ್ರಾರಂಭ:** ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕುಲಪತಿಗಳಾದ ಪ್ರೊ.ರಮೇಶ್.ಬಿ. ಶೀಘ್ರದಲ್ಲಿ ಪ್ರಸಾರಾಂಗ ಪ್ರಾರಂಭಿಸುವುದಾಗಿ ಪ್ರಕಟಿಸಿದರು. ವಿಶ್ವಮಾನವ ಕುವೆಂಪುರವರ ಜನ್ಮದಿನದ ಆಚರಣೆ ಹಾಗೂ ಉಪನ್ಯಾಸ ಮಾಲೆಯ ಮೂಲಕ ಜನಪರ ಸಾಹಿತ್ಯ ಚಟುವಟಿಕೆಗಳಿಗೆ ಹೊಸ ಆಯಾಮ ನೀಡಲಾಗುವುದೆಂದು ತಿಳಿಸಿದರು.



ರಾಜ್ಯೋತ್ಸವ ಸಮಾರಂಭದಲ್ಲಿ, ಹಿರಿಯ ಪತ್ರಕರ್ತೆ, ಲೇಖಕಿ ಆರ್. ಪೂರ್ಣಿಮಾ, ಕುಲಪತಿಗಳಾದ ಪ್ರೊ ರಮೇಶ್ ಬಿ ಮತ್ತು ಇತರೆ ಗಣ್ಯರ ಸಮ್ಮುಖದಲ್ಲಿ ಅನಿಕೇತನ ಮಾಸಪತ್ರಿಕೆಯ ಪ್ರಥಮ ಸಂಚಿಕೆಯನ್ನು ಬಿಡುಗಡೆ ಮಾಡಿದರು.

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿಜ್ಞಾನ, ವಾಣಿಜ್ಯ, ಆಡಳಿತ ಮತ್ತು ಮಾನವಿಕ ಶಾಸ್ತ್ರಗಳ ಪಠ್ಯಕ್ರಮ ಹಾಗೂ ಪಠ್ಯ ಪುಸ್ತಕಗಳನ್ನು ಕನ್ನಡದಲ್ಲಿ ಒದಗಿಸುವ ಏರ್ಪಾಡು ಮಾಡುವುದಾಗಿ ಕುಲಪತಿಗಳು ಭರವಸೆಯಿತ್ತರು. ಮುಂದಿನ ದಿನಗಳಲ್ಲಿ ಪದವಿ ವಿದ್ಯಾರ್ಥಿಗಳಿಗೂ ಈ ಸೌಲಭ್ಯ ಕಲ್ಪಿಸುವುದಾಗಿ ಅವರು ವಿವರಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬಿಸಿಯು ಕುಲಸಚಿವರಾದ ಎ.ನವೀನ್ ಜೋಸೆಫ್, 1956 ನವಂಬರ್ 1 ರಂದು ವಿಶಾಲ ಮೈಸೂರು ರಾಜ್ಯ ಉದಯದ ಐತಿಹಾಸಿಕ ಸಮಾರಂಭ ಸೆಂಟ್ರಲ್ ಕಾಲೇಜ್ ಕ್ರಿಕೆಟ್ ಮೈದಾನದಲ್ಲೇ ನಡೆದಿದ್ದನ್ನು ಉಲ್ಲೇಖಿಸಿದರು. ಕರ್ನಾಟಕ ಏಕೀಕರಣ ಚಳವಳಿ ಮತ್ತು ಗೋಕಾಕ್ ಚಳವಳಿಯ ಸಂದರ್ಭಗಳಲ್ಲೂ ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘ ಸಕ್ರಿಯ ಪಾತ್ರ ವಹಿಸಿತ್ತೆಂದು ಅವರು ಪ್ರಸ್ತಾಪಿಸಿದರು. ಬಿಸಿಯು ವಿತ್ತಾಧಿಕಾರಿಗಳಾದ ಎಂ.ವಿ. ವಿಜಯಲಕ್ಷ್ಮಿ ಮತ್ತು ಸಿಂಡಿಕೇಟ್ ಸದಸ್ಯರಾದ ಡಾ. ಬಿ.ಆರ್. ಸುಪ್ರೀತ್ ವೇದಿಕೆಯಲ್ಲಿ ಉಪಸ್ಥಿತ–ರಿದ್ದರು. ವಿದ್ಯಾವಿಷಯಕ ಪರಿಷತ್ ಸದಸ್ಯರಾದ ಡಾ.ಚಮನ್ ಫರ್ಜಾನಾ, ಡಾ.ಕೃಷ್ಣಮೂರ್ತಿ.ಜಿ, ಡಾ. ಮಹಂತಗೌಡ, ಎಂ.ಟಿ. ಶ್ರೀನಿವಾಸ್, ಕಿರಣ್ ಎಚ್.ಎಸ್. ಹಾಗೂ ಡೀನರು, ಹಿರಿಯ ಪ್ರಾಧ್ಯಾಪಕರು, ಬೋಧಕ–ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಡಾ.ಎಸ್. ಅಖ್ತರ್ ಕಾರ್ಯಕ್ರಮ ನಿರೂಪಿಸಿದರು. ಡಾ.ಎಸ್. ಎಂ.ಗೋಪಿ ಸ್ವಾಗತಿಸಿ ಡಾ. ಡಿ. ಎಸ್.ಪ್ರವೀಣ ವಂದಿಸಿದರು.

## ಕನಕದಾಸ ಜಯಂತಿ

ವಿಶ್ವಮಾನವ ಪ್ರಜ್ಞೆಯ ಪ್ರತೀಕವಾದ ಕನಕದಾಸರ ಕೀರ್ತನೆಗಳು ಸಾಮಾಜಿ–ಕ ಸಮಾನತೆ ಸಾರುವ ತತ್ವಪದಗಳಾಗಿ ಜನಮನದಲ್ಲಿ ಚಿರಸ್ಥಾಯಿಯಾಗಿವೆ ಎಂದು ಕುಲಪತಿಗಳಾದ ಪ್ರೊ. ರಮೇಶ್ .ಬಿ. ಪ್ರತಿಪಾದಿಸಿದರು. ರಾಜಾಜಿ ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ ಕನಕದಾಸ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಸವಣ್ಣನವರ ಕಾಲದ ವಚನ ಸಾಹಿತ್ಯ ಚಳವಳಿಯ ಬಳಿಕ ದಾಸ ಸಾಹಿತ್ಯ ಕನ್ನಡ ಸಾರಸ್ವತ ಲೋಕಕ್ಕೆ ಅಮೂಲ್ಯ ಕೊಡುಗೆ ನೀಡಿದೆ ಎಂದು ವಿವರಿಸಿದರು, ಜನಭಾಷೆಯಾದ ಕನ್ನಡದಲ್ಲಿ ಮೌಲಿಕ ಕೃತಿಗಳನ್ನು ರಚಿಸಿರುವ ಕನಕದಾಸರು ಜಾತಿ ತಾರತಮ್ಯ ನಿವಾರಣೆಯ ಸಂದೇಶ ಸಾರಿದ ಸಮಾಜ ಸುಧಾರಕರೆಂದು ಅವರು ಬಣ್ಣಿಸಿದರು. ಕುಲಸಚಿವರಾದ ಎ. ನವೀನ್ ಜೋಸೆಫ್, ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ್ ಕುಡೇನಟ್ಟಿ, ಸಿಂಡಿಕೇಟ್ ಸದಸ್ಯರಾದ ಕೃಷ್ಣರಾಮ್ ಉಪಸ್ಥಿತರಿದ್ದರು. ಡಾ.ಅಖ್ತರ್. ಸ್ವಾಗತಿಸಿ, ಡಾ. ಮಂಜು.ಸಿ.ಎನ್. ವಂದಿಸಿದರು

## ವಿವಿ ಮಹಿಳಾ ಕಾಲೇಜಿನಲ್ಲಿ ರಾಜ್ಯೋತ್ಸವ




ರಾಜ್ಯೋತ್ಸವದ ಪ್ರಯುಕ್ತ ಮಹಿಳಾ ಕಾಲೇಜಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ

ಮಲ್ಲೇಶ್ವರಂನಲ್ಲಿರುವ ಬಿಸಿಯು ಮಹಿಳಾ ಮಹಾವಿದ್ಯಾಲಯ ಕಾಲೇಜಿನಲ್ಲಿ ನವಂಬರ್ 15 ರಂದು ರಾಜ್ಯೋತ್ಸವ ಸಮಾರಂಭ ಏರ್ಪಡಿಸಲಾಗಿ–ತ್ತು. ಈ ನಿಮಿತ್ತ ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆ, ವೇಷಭೂಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

'ಕನ್ನಡ ಭಾಷಾ ಜಾಗೃತಿ' ಕು–ರಿತಾದ ಕಿರು ನಾಟಕವನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು. 'ಕನ್ನಡ ಭಾಷೆಯ ಉಳಿವಿನ ಜವಾಬ್ದಾರಿ' ವಿಷಯದ ಕುರಿತಾಗಿ ಚರ್ಚಾಗೋಷ್ಠಿ ನಡೆಯಿತು. ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ಕನ್ನಡ ಪುಸ್ತಕಗಳನ್ನು ಬಹುಮಾನವಾಗಿ ವಿತ–ರಿಸಲಾಯಿತು.

ಕನ್ನಡ ಉಪನ್ಯಾಸಕಿ ಡಾ. ಶೋಭಾ. ಸಿ. ರಾಜ್ಯೋತ್ಸವದ ಆಚರಣೆಯ ಮಹತ್ವದ ಬಗ್ಗೆ ವಿವರಿಸಿದರು. ಉಪನ್ಯಾಸಕರಾದ ಅನುಪಮಾ ಸ್ವಾಗತಿಸಿ ಪ್ರೀತಿ ಸರ್ವರಿಗೂ ವಂದಿಸಿದರು.



ಸರ್ದಾರ್ ವಲ್ಲಭಭಾಯಿ ಪಟೇಲ್‌ರ 150ನೇ ಜನ್ಮದಿನದ ಪ್ರಯುಕ್ತ ಬಿಸಿಯು ಕುಲಪತಿಗಳಾದ ಪ್ರೊ.ರಮೇಶ್.ಬಿ. ಪ್ರತಿಜ್ಞಾವಿಧಿ ಬೋಧಿಸಿದರು.

## ರಾಷ್ಟ್ರೀಯ ಶಿಕ್ಷಣ ದಿನಾಚರಣೆ

ಆರ್ಥಿಕ ಪ್ರಗತಿ, ಮೂಲಸೌಕರ್ಯ, ತಂತ್ರಜ್ಞಾನ ಅಭಿವೃದ್ಧಿಯ ಜೊತೆಗೆ ನೈತಿಕತೆ ಮತ್ತು ವ್ಯಕ್ತಿತ್ವ ವಿಕಾಸದ ಬಗ್ಗೆಯೂ ಶಿಕ್ಷಣ ವ್ಯವಸ್ಥೆಯಲ್ಲಿ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಾದ ಅಗತ್ಯವಿದೆ ಎಂದು ಶಿಕ್ಷಣ–ತಜ್ಞರಾದ ಡಾ.ಬಿ.ಪಾರ್ವತಿದೇವಿ ಪ್ರತಿಪಾದಿಸಿದ್ದಾರೆ.

ಬಿಸಿಯು ನೂತನ ಶೈಕ್ಷಣಿಕ ವಿಭಾಗದಲ್ಲಿ ಭಾರತದ ಪ್ರಥಮ ಶಿಕ್ಷಣ ಸಚಿವರಾದ ಡಾ. ಮೌಲಾನಾ ಅಬ್ದುಲ್ ಕಲಾಂ ಆಜಾದ್‌ರ ಜನ್ಮದಿನದ ಪ್ರಯುಕ್ತ ಏರ್ಪಡಿಸಲಾಗಿದ್ದ "ರಾಷ್ಟ್ರದ ಅಭಿವೃದ್ಧಿ ಮತ್ತು ವ್ಯಕ್ತಿತ್ವ ನಿರ್ಮಾಣದಲ್ಲಿ ಶಿಕ್ಷಣದ ಪಾತ್ರ" ಎಂಬ ವಿಷಯದ ಕು–ರಿತ ಕಾರ್ಯಾಗಾರ ಉದ್ದೇಶಿಸಿ ಮಾತನಾಡಿದ ಅವರು. ಪಠ್ಯಕ್ರಮದ ಬೋಧನೆಯ ಜೊತೆಗೆ ಮಾನವೀಯ ಮೌಲ್ಯಗಳು ಮತ್ತು ಸಾಮಾಜಿಕ ಕಾಳಜಿ ಗುಣಗಳನ್ನುಪೋಷಿಸಬೇಕೆಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಿಸಿಯು ಕುಲಸಚಿವರಾದ ಎ. ನವೀನ್ ಜೋಸೆಫ್‌ರವರು ವಿದ್ಯಾರ್ಥಿಗಳು ವಿಮರ್ಶಾತ್ಮಕ ಮನೋಭಾವ, ಮಾನವೀಯತೆ ಮತ್ತು ಸಾಮಾಜಿಕ ಸಮಾನತೆಯ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕೆಂದು ಸೂಚಿಸಿದರು. ಸ್ನಾತಕೋತ್ತರ ವಿದ್ಯಾರ್ಥಿಗಳಾದ ಕಾರ್ತಿಕ್, ವಾಲಿಸ್, ಮೋಹನ್ ಮತ್ತು ಗೋಕುಲ್ ಸಂವಾದದಲ್ಲಿ ಪಾಲ್ಗೊಂಡರು. ಇತಿಹಾಸ ವಿಭಾಗದ ಡಾ.ಎಂ.ಮಾಲಿನಿ ಕಾರ್ಯಕ್ರಮ ನಿರೂಪಿಸಿದರು ಮತ್ತು NSS ಸಂಯೋಜ–ಕರಾದ ಡಾ.ಗೋವಿಂದೇಗೌಡ ವಂದಿಸಿದರು.

## BCU Chemical Society Inaugurated

The Department of Studies and Research in Chemistry, achieved a new milestone with the inauguration of the BCU Chemical Society. Prof. Ramesh B., Hon'ble Vice-Chancellor, in his keynote address, highlighted the vision of the society is to build a vibrant platform for research and to foster curiosity, innovation, and collaboration among budding chemists. Finance Officer Vijayalakshmi and Chairperson Prof. P.R.Chetana were present on the occasion. Prof. H.S. Bhojya Naik, former Professor-Department of PG studies & Research in Industrial Chemistry, Kuvempu University, Shankaraghatta, delivered the inaugural lecture on "Metal-Based Photoactive Materials and Their Perspectives".

**Special lecture:** Prof.B.S.Sheshadri memorial 23rd lecture programme was organised by ECSI and BCU Chemical Society. Dr. J.N. Balaraju (CSIR–NAL), delivered an insightful talk on "Electroless Nickel Coatings in Aerospace and Beyond,"explaining its mechanism and industrial applications.

## GOLD GLOWS BRIGHT AS WORLD TURNS AWAY FROM THE DOLLAR

**-Rovin Rex, 1st yr M.A. (Economics)**

Gold has become the world's favourite metal again in 2025, with prices crossing $4,000 per ounce, the highest in decades. Central banks across, Asia, the Middle East, and Latin America are buying gold at record levels, shifting away from holding U.S. dollars. Major buyers include China, Poland, Turkey, India and Kazakhstan seek gold as safer and politically neutral reserve even with high prices. This global move is known as de-dollarization, a process where countries reduce their dependence on the U.S. dollar for trade and savings.



Increasing Gold Rates. Image Source: Hans India

**De – dollarization and India's Role:**

RBI has introduced frameworks for rupee-based trade settlements with 19 countries, including Russia, Bangladesh, and UAE. 90% of India – Russia trade is already conducted in local currencies. India's rising gold reserves, both in tonnage and as a share of forex demonstrate growing financial strength and strategic diversification.

**Forex reserves:** 692. 57 billion USD.

**Gold reserves:** 880 metric tonnes.

# ಭಾರತ ಸಂವಿಧಾನ ರಚನೆಯ ಹೆಜ್ಜೆಗುರುತು

**–ಡಾ. ಅಮರ್. ಎಸ್,**
**ಉಪನ್ಯಾಸಕರು, ರಾಜಕೀಯಶಾಸ್ತ್ರ ವಿಭಾಗ, ಬಿಸಿಯು.**

ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೆಂಬ ಹೆಗ್ಗಳಿಕೆಗೆ ಪಾತ್ರವಾದ ಭಾರತದ ಸಂವಿಧಾನ ಜಗತ್ತಿನ ಅತಿದೀರ್ಘವಾದ ಲಿಖಿತ ಸಂವಿಧಾನವಾಗಿದ್ದು ಅದರ ರಚನಾ ಪ್ರಕ್ರಿಯೆಯೂ ಸುದೀರ್ಘವಾಗಿದೆ. ವಿವಿಧ ಜನಾಂಗ, ಜಾತಿ, ಧರ್ಮ, ಭಾಷೆಗಳು ಹಾಗೂ ವಿಭಿನ್ನ ಆಚಾರ–ವಿಚಾರ ಮತ್ತು ಸಂಸ್ಕೃತಿ–ಸಂಪ್ರದಾಯಗಳನ್ನು ಹೊಂದಿರುವ ಅಪಾರ ಜನಸಂಖ್ಯೆಯ ವಿಶಾಲ ದೇಶವಾಗಿರುವ ಭಾರತವನ್ನು ಭಾವೈಕ್ಯತೆಯ ಮೂಲಕ ಒಂದುಗೂಡಿಸಿ ಸಮರ್ಪಕ ಆಡಳಿತ ಒದಗಿಸುವ ಸಂಕೀರ್ಣ ಸವಾಲಿನ ಹಿನ್ನಲೆಯಲ್ಲಿ ಸೂಕ್ತ ಸಂವಿಧಾನ ಚೌಕಟ್ಟನ್ನು ರೂಪಿಸುವುದು ಮಹತ್ತರ ಕಾರ್ಯವಾಗಿ–ತ್ತು. ಸ್ವಾತಂತ್ರ್ಯ ಸಂಗ್ರಾಮದ ದಿನಗಳಲ್ಲೇ ಸಂವಿಧಾನ ರಚನೆಯ ಕುರಿತು ಗಂಭೀರ ಚರ್ಚೆಯು ಪ್ರಾರಂಭವಾಗಿತ್ತು. 1928ರಲ್ಲಿ ಜರುಗಿದ ಸರ್ವಪಕ್ಷ ಸಮ್ಮೇಳನದ ನಿರ್ಣಯದ ಮೇರೆಗೆ ಮೋತಿಲಾಲ್ ನೆಹರುರವರು ಲಕ್ನೋ ಕಾಂಗ್ರೆಸ್ ಅಧಿವೇಶನದಲ್ಲಿ ಭವಿಷ್ಯದ ಸಂವಿಧಾನಾತ್ಮಕ ಚೌಕಟ್ಟಿನ ಕುರಿತ 'ನೆಹರು ವರದಿ' ಎಂದೇ ಹೆಸರಾದ ಕರಡನ್ನು ಸಲ್ಲಿಸಿದರು. 1929ರಲ್ಲಿ ಜರುಗಿದ ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ ಜವಹರಲಾಲ್ ನೆಹರು ಐತಿಹಾಸಿಕ 'ಸಂಪೂರ್ಣ ಸ್ವರಾಜ್' ನಿರ್ಣಯವನ್ನು ಮಂಡಿಸಿದರು. 1934ರಲ್ಲಿ ಸಮಾಜವಾದಿ ಚಿಂತಕರಾದ ಎಂ.ಎನ್.ರಾಯ್ ಮೊಟ್ಟಮೊದಲ ಬಾರಿಗೆ ಬ್ರಿಟಿಷ್ ಸರ್ಕಾರದ ಮುಂದೆ ಸಂವಿಧಾನ ರಚನಾ ಸಭೆಯ ಬೇಡಿಕೆಯನ್ನು ಮುಂದಿಟ್ಟರು. ತದನಂತರ ಭಾರತ ರಾಷ್ಟ್ರೀಯ ಕಾಂಗ್ರೆಸ್


THE CONSTITUTION OF INDIA

PREAMBLE

WE, THE PEOPLE OF INDIA, having solemnly resolved to constitute India into a SOVEREIGN SOCIALIST SECULAR DEMOCRATIC REPUBLIC and to secure to all its citizens:

JUSTICE, social, economic and political;

LIBERTY of thought, expression, belief, faith and worship;

EQUALITY of status and of opportunity; and to promote among them all

FRATERNITY assuring the dignity of the individual and the unity and integrity of the Nation;

IN OUR CONSTITUENT ASSEMBLY this twenty-sixth day of November, 1949, do HEREBY ADOPT, ENACT AND GIVE TO OURSELVES THIS CONSTITUTION.

ಭಾರತ ಸಂವಿಧಾನದ ಪ್ರಸ್ತಾವನೆ

ಅಧಿಕೃತವಾಗಿ ಅಂತಹುದೇ ಒತ್ತಾಯವನ್ನು ಮಂಡಿಸಿತು. ಎರಡನೇ ಮಹಾಯುದ್ಧದ ನಂತರ ಈ ಪ್ರಸ್ತಾವನೆಗೆ ಚಾಲನೆ ದೊರೆತು ಬ್ರಿಟನ್‌ನಲ್ಲಿ ಅಧಿಕಾರಕ್ಕೆ ಬಂದ ಲೇಬರ್ ಪಾರ್ಟಿಯ ಸರ್ಕಾರ 1946ರಲ್ಲಿ ಭಾರತಕ್ಕೆ ಕ್ಯಾಬಿನೆಟ್ ಮಿಷನ್ ಆಯೋಗವನ್ನು ಕಳುಹಿಸಿತು. ತತ್ಪರಿಣಾಮವಾಗಿ 1946 ಡಿಸೆಂಬರ್ 9ರಂದು ದೆಹಲಿಯ ಸಂಸತ್ ಸೆಂಟ್ರಲ್ ಹಾಲ್‌ನಲ್ಲಿ ಸಂವಿಧಾನ ರಚನೆಯ ಪ್ರಥಮ ಸಭೆ ಏರ್ಪಟ್ಟಿತು. ಆರಂಭದಲ್ಲಿ 389 ಸದಸ್ಯರ ಪೈಕಿ 292 ಮಂದಿ ನೂತನವಾಗಿ ಚುನಾಯಿತವಾದ ಪ್ರಾಂತೀಯ ವಿಧಾನಸಭೆಗಳಿಂದ ಆಯ್ಕೆಯಾದರೆ 93 ಸದಸ್ಯರು ರಾಜಪ್ರಭುತ್ವದ ಪ್ರಾಂತ್ಯಗಳಿಂದ ನೇಮಕಗೊಂಡಿದ್ದರು.

ಡಾ.ಬಾಬು ರಾಜೇಂದ್ರಪ್ರಸಾದ್ ಅಧ್ಯಕ್ಷರಾಗಿದ್ದ ಸಂವಿಧಾನ ರಚನಾ ಸಭೆಯು ಒಟ್ಟು 22 ಸಮಿತಿಗಳನ್ನು ಒಳಗೊಂಡಿತ್ತು. ದೇಶ ವಿಭಜನೆಯ ಬಳಿಕ ಬದಲಾದ ಸನ್ನಿವೇಶದಲ್ಲಿ 1947 ಆಗಸ್ಟ್ 29ರಂದು ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಕ್ಷತೆಯಲ್ಲಿ ಏಳು ಸದಸ್ಯರ ಸಂವಿಧಾನ ಕರಡು ಸಮಿತಿ ರಚಿಸಲಾಯಿತು. ಒಟ್ಟು 299 ಸದಸ್ಯರಿದ್ದ ಸಂವಿಧಾನ ರಚನಾ ಸಭೆಯು ಸುದೀರ್ಘವಾದ ಚರ್ಚೆಯ ನಂತರ 1949 ನವಂಬರ್ 26ರಂದು ನೂತನ ಸಂವಿಧಾನದ ಕರಡನ್ನು ಅಂಗೀಕರಿಸಿತು. 1950 ಜನವರಿ 26ರಂದು ಹೊಸ ಸಂವಿಧಾನದ ಜಾರಿಯ ಮೂಲಕ ಭಾರತವನ್ನು ಗಣರಾಜ್ಯವೆಂದು ಘೋಷಿಸಲಾಯಿತು.

ಮೂಲದಲ್ಲಿ ಒಟ್ಟು 395 ವಿಧಿಗಳು, 22 ಭಾಗಗಳು ಮತ್ತು 8 ಅನುಸೂಚಿಗಳನ್ನು ಒಳಗೊಂಡಿದ್ದ ಭಾರತದ ಸಂವಿಧಾನ ಕಳೆದ 75 ವರ್ಷಗಳಲ್ಲಿ 106 ತಿದ್ದುಪಡಿ ಅಳವಡಿಸಿಕೊಂಡಿದೆ. ಇದೀಗ ಸಂವಿಧಾನದ ಗಾತ್ರ 465 ವಿಧಿಗಳು, 25 ಭಾಗಗಳು, 12 ಅನುಸೂಚಿಗಳನ್ನು ಹೊಂದಿದ್ದು 1,46,385 ಪದಗಳಿಗೆ ವಿಸ್ತ–ರಿಸಲ್ಪಟ್ಟಿದೆ. ಸಂವಿಧಾನ ರಚನೆಗೆ ಒಟ್ಟು 2 ವರ್ಷಗಳು, 11 ತಿಂಗಳು ಮತ್ತು 18 ದಿನಗಳ ಕಾಲಾವಧಿ ತೆಗೆದುಕೊಂಡಿದೆ.

## ವಂದೇ ಮಾತರಂಗೆ 150 ರ ಸಂಭ್ರಮ

**–ಬಾಲು.ಎನ್, ಎಂಸಿಜೆ ದ್ವಿತೀಯ,ಬಿಸಿಯು.**

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ದೇಶಪ್ರೇಮದ ಸ್ಫೂರ್ತಿಯ ಸಂಕೇತವಾಗಿದ್ದ 'ವಂದೇ ಮಾತರಂ' ಗೀತೆಗೆ 150 ವರ್ಷಗಳು ತುಂಬಿದ ಸಂಭ್ರಮವನ್ನು 2025 ನವಂಬರ್ 7ರಿಂದ ಒಂದು ವರ್ಷ ಕಾಲ ಆಚರಿಸಲಾಗುತ್ತಿದೆ. ಮುಂಬರುವ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆ ಸಂದರ್ಭಗಳಲ್ಲೂ ಇದನ್ನು ರಾಷ್ಟ್ರಗೀತೆಯ ಜೊತೆಗೆ ಹಾಡುವಂತೆ ಭಾರತ ಸರ್ಕಾರ ನಿರ್ದೇಶಿಸಿದೆ. ಬಂಕಿಮ ಚಂದ್ರ ಚಟರ್ಜಿಯವರು ರಚಿಸಿದ ಈ ಗೀತೆಯು 1882ರಲ್ಲಿ ಮೊದಲ ಬಾರಿಗೆ ಅವರ 'ಆನಂದಮಠ' ಬಂಗಾಳಿ ಕಾದಂಬರಿಯಲ್ಲಿ ಪ್ರಕಟವಾಯಿತು. 1896ರಲ್ಲಿ ಜರುಗಿದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಕವಿ ರವೀಂದ್ರನಾಥ ಟಾಗೂರ್‌ರವರು ಈ ಗೀತೆಗೆ ರಾಗ ಸಂಯೋಜಿಸಿ ಹಾಡಿದರು. 1937ರಲ್ಲಿ ಕಾಂಗ್ರೆಸ್ ಪಕ್ಷ ಇದನ್ನು ರಾಷ್ಟ್ರೀಯ ಗೀತೆಯಾಗಿ ಅಳವಡಿಸಿಕೊಂಡಿತು. ಆನಂತರ ಈ ಗೀತೆ ಪ್ರಭಾತ್ ಭೇರಿ ಹಾಡಾಗಿ ಅಪಾರ ಜನಪ್ರಿಯತೆ ಪಡೆಯಿತು. ಭಾರತ ಸಂವಿಧಾನ ಸಭೆಯು ವಂದೇ ಮಾತರಂ ಗೀತೆಗೆ ರಾಷ್ಟ್ರೀಯ ಗೀತೆಯಾಗಿ ಅಧಿಕೃತ ಮನ್ನಣೆ ನೀಡಿತು.

## ಸಂವಿಧಾನ ಸಮರ್ಪಣಾ ದಿನಾಚರಣೆ



ಮಲ್ಲೇಶ್ವರಂ ಮಹಿಳಾ ಘಟಕ ಕಾಲೇಜಿನಲ್ಲಿ ಸಂವಿಧಾನ ದಿನಾಚರಣೆ ಪ್ರಯುಕ್ತ ವಿದ್ಯಾರ್ಥಿಗಳಿಗೆ ಸಂವಿಧಾನ ಕೈಪಿಡಿ ವಿತರಿಸಲಾಯಿತು.

## ಮಾಹಿತಿ ಹಕ್ಕು ಕಾಯ್ದೆಗೆ 20 ವರ್ಷ

**–ಡಾ. ಮರಿಸ್ವಾಮಿ, ಕೆ**
**ಉಪನ್ಯಾಸಕರು, ಸಂವಹನ ವಿಭಾಗ.**

ಸ್ವತಂತ್ರ ಭಾರತದ ಇತಿಹಾಸದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಹೊಸ ಭರವಸೆ ತುಂಬಿದ ಮಾಹಿತಿ ಹಕ್ಕು ಕಾಯ್ದೆಯು ಇತ್ತೀಚೆಗಷ್ಟೇ ಎರಡು ದಶಕಗಳನ್ನು ಪೂರೈಸಿದೆ. 2005 ಅಕ್ಟೋಬರ್ 12ರಿಂದ ಜಾರಿಗೆ ಬಂದ ಈ ಕಾಯ್ದೆಯು ಆಡಳಿತದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ತರುವ ಜೊತೆಗೆ ಭ್ರಷ್ಟಾಚಾರ ನಿಯಂತ್ರಣದ ಉದ್ದೇಶವನ್ನೂ ಹೊಂದಿದೆ. ಮಾಹಿತಿ ಹಕ್ಕು ಕಾಯ್ದೆ ಸಂವಿಧಾನದ ಮೂಲಭೂತ ಹಕ್ಕುಗಳ ಸಾಲಿನಲ್ಲಿ ಸೇರಿಲ್ಲವಾದರೂ ಅಭಿವ್ಯಕ್ತಿ ಮತ್ತು ವಾಕ್ ಸ್ವಾತಂತ್ರ್ಯ ಖಾತರಿಪಡಿಸುವ 19(1)(ಎ) ವಿಧಿ ಹಾಗೂ ಜೀವರಕ್ಷಣೆ ಮತ್ತು ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ 21ನೇ ವಿಧಿ ಅಡಿಯಲ್ಲಿ ಇದನ್ನು ರೂಪೀಕರಿಸಲಾಗಿದೆ. ರಾಷ್ಟ್ರೀಯ ಭದ್ರತೆ ಮತ್ತು ಖಾಸಗಿ ಗೌಪ್ಯತೆ ಮುಂತಾದ ವಿಷಯಗಳಲ್ಲಿ ಮಾತ್ರ ನಿರ್ಬಂಧಗಳನ್ನು ವಿಧಿಸಲಾಗಿದೆ. ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಕೆಯಾಗುತ್ತಿರುವ ಅರ್ಜಿಗಳ ಸಂಖ್ಯೆ ಪ್ರತಿವರ್ಷ ಏರಿಕೆಯಾಗುತ್ತಿದ್ದು ಕಳೆದ ವರ್ಷ 10 ಲಕ್ಷದ ಗಡಿಯನ್ನು ಸಮೀಪಿಸಿದೆ. ಇದೇ ವೇಳೆ 4 ಲಕ್ಷಕ್ಕೂ ಹೆಚ್ಚು ಅರ್ಜಿಗಳು ಮತ್ತು ಮೇಲ್ಮನವಿಗಳು ಕೇಂದ್ರ ಮತ್ತು ರಾಜ್ಯ ಆಯೋಗಗಳ ಮುಂದೆ ಬಾಕಿ ಇವೆ. ಇದಕ್ಕೆ ಅಪಾರ ಸಂಖ್ಯೆಯ ಮಾಹಿತಿ ಆಯುಕ್ತರ ಹುದ್ದೆಗಳು ಖಾಲಿಯಿರುವುದೇ ಕಾರಣವಾಗಿದೆ. ಮಾಹಿತಿ ಹಕ್ಕು ಕಾಯ್ದೆಯ ದುರುಪಯೋಗದ ದೂರುಗಳು ಕೇಳಿಬರುತ್ತಿದ್ದು ಮತ್ತೊಂದೆಡೆ ಆರ್‌ಟಿಐ ಅರ್ಜಿದಾರರ ಮೇಲೆ ದಾಳಿ, ದಬ್ಬಾಳಿಕೆ ಮತ್ತು ಬೆದರಿಕೆಯ ಘಟನೆಗಳೂ ವರದಿಯಾಗಿವೆ.

## FACULTY DEVELOPMENT PROGRAM ON MBA CURRICULUM

The BCU School of Management Studies, Dr. Manmohan Singh Bengaluru City University, in association with Seshadripuram Educational Institutions, organised a high-impact One-Day Faculty Development Programme on the updated MBA Curriculum for I & II Semesters. This event brought together more than 250 faculty members, senior academicians, industry leaders, and policy influencers, marking a significant academic initiative aimed at strengthening management education across the university's affiliated institutions. The inaugural ceremony was graced by eminent personalities including Dr. Wooday P. Krishna, Honorary General Secretary, Seshadripuram Educational Trust and P. R. Basavaraju, National President, National Institute of Personal Management (NIPM). Prof. Ramesh B, Vice Chancellor, presided over the programme. Naveen Joseph A (Registrar), Prof. Ramesh B. Kudenatti (Registrar Evaluation), and Vijayalakshmi M. V (Finance Officer) were present on the occasion. Dr. Sarika Lohana, Faculty, IIM Kozhikode & SEBI Certified Finance Expert, in her keynote address highlighted the transition toward Outcome-Based Education (OBE), contemporary pedagogies, and the essential alignment between curriculum and real-world managerial competencies. Dr. Nirmala M, Professor & Director, BCUSMS, briefed about the objectives of the programme. The event was efficiently coordinated by Dr. Ritika Sinha and Dr. Vinay S, who served as Organising Secretaries.

**-Dr. Vinay S**

## Sociology Lecture Programme

**-Dr. Savitha B C,**

The Department of Studies and Research in Sociology organised a special lecture on "Applications of Sociological Theories in Contemporary Society" on 11th November, at New Academic block, BCU. Prof Lakshmipathi C.G. from Maharani's Cluster University, delivered special lecture focusing on various Sociological theories and perspectives applicable to contemporary society. He emphasised that students of Sociology should be keen in observing and describing the phenomenon occurring in the society.

Faculty and students from the Department actively participated in the 17th National Sociology Conference held at Government College, Sidlaghatta, Chikkaballapur District.

## Bengaluru Tech Summit 2025



Vice-chancellor Prof.Ramesh .B. with university faculty members.

- Deeksha, (Commerce Dept.)

The BCU stall attracted industry leaders, academicians, students, and international delegates. Visitors engaged enthusiastically with information on programmes at Bengaluru City University as well as its newly introduced courses designed to meet the demands of a rapidly evolving tech-driven world.

### Pythian Games 2025



Mohammad Umar, 2nd year student from the Dept. of English, participated and secured silver medals at the 2nd National Cultural Pythian Games held BCU campus on 8th November

### KSET TOP SCORERS


VARUN S

Varun. S, of 3rd Sem MCJ has secured 1st Rank in 2025 Katnataka State Eligibilbity Test. Hemant M, secured 4th Rank. and Uday Gurucharan, secured 11th Rank.

## AI ತರಬೇತಿ ಶಿಬಿರ

**–ನೂರ್ ಜಹಾನ್ ಮದಾರಿ,MCJ**

ಬಿಸಿಯು ಸಮೂಹ ಮಾಧ್ಯಮ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಆಶ್ರಯದಲ್ಲಿ ಕೃತಕ ಬುದ್ಧಿಮತ್ತೆ (ಎಐ) ವಿಶೇಷ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿತ್ತು. ADIRA Al for Digital Readiness & Advancement ಸಂಸ್ಥೆಯಿಂದ ತರಬೇತಿದಾರರಾದ ಡಾ. ರವಿನಂದನ್ ವಿದ್ಯಾರ್ಥಿಗಳಿಗೆ ಎಐ ಬಳಕೆ ಕುರಿತು ಪ್ರಾಯೋಗಿಕ ತರಬೇತಿ ನೀಡಿದರು. Chat GPT, custom GPT, Perplexity Pro, Notebook LM, ಹಾಗೂ ಕಂಟೆಂಟ್ ಕ್ರಿಯೇಟ್ ಮಾಡುವುದು , PPT ವಿಧಾನ ಮತ್ತು GAMMA AI ಬಗ್ಗೆ ಅರ್ಥಪೂರ್ಣವಾಗಿ ವಿವರಿಸಿದರು. ವಿಭಾಗ ಮುಖ್ಯಸ್ಥರಾದ ಪ್ರೊ. ತಾಂಡವಗೌಡ ಟಿ.ಎನ್. ಹಾಗೂ ಉಪನ್ಯಾಸಕರು ಉಪಸ್ಥಿತರಿದ್ದರು.

## ವಿವಿ ಮರುನಾಮಕರಣ

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಹೆಸರನ್ನು "ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ" ಎಂದು ಕರ್ನಾಟಕ ಸರ್ಕಾರದ ಅಧಿಕೃತ ಆದೇಶದ ಮೇರೆಗೆ ಮರುನಾಮಕರಣ ಮಾಡಲಾಗಿದೆ.

# ಬಿಸಿಯು ಅಂತರ ಕಾಲೇಜು ಅಥ್ಲೆಟಿಕ್ ಕ್ರೀಡಾಕೂಟ

**ಬಿಸಿಯು ನವೆಂಬರ್ 12:** ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 7ನೇ ವಾರ್ಷಿಕ ಅಂತರ ಕಾಲೇಜು ಅಥ್ಲೆಟಿಕ್ ಕ್ರೀಡಾಕೂಟದ ಪುರುಷರ ವಿಭಾಗದಲ್ಲಿ ಕೋರಮಂಗಲದ ಸೇಂಟ್ ಫ್ರಾನ್ಸಿಸ್ ಕಾಲೇಜು ಹಾಗೂ ಮಹಿಳೆಯರ ವಿಭಾಗದಲ್ಲಿ ಮೌಂಟ್ ಕಾರ್ಮೆಲ್ ಕಾಲೇಜಿನ ತಂಡಗಳು ಸಮಗ್ರ ಚಾಂಪಿಯನ್‌ಷಿಪ್ ಪ್ರಶಸ್ತಿ ಗಳಿಸಿಕೊಂಡಿವೆ. ಎರಡು ದಿನಗಳ ಈ ಕ್ರೀಡಾಕೂಟದಲ್ಲಿ 136 ಕಾಲೇಜುಗಳಿಂದ ಒಟ್ಟು 1200 ಕ್ರೀಡಾಪಟುಗಳು ಪಾಲ್ಗೊಂಡಿದ್ದರು.

ಬಿಸಿಯು ದೈಹಿಕ ಶಿಕ್ಷಣ ನಿರ್ದೇಶನಾಲಯದ ಆಶ್ರಯದಲ್ಲಿ ನವೆಂಬರ್ 12, 13ರಂದು ನಗರದ ಕಂಠೀರವ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದ್ದ ಈ ಕ್ರೀಡಾಕೂಟವನ್ನು ಬಿಸಿಯು ಕುಲಪತಿಗಳಾದ ಪ್ರೊ. ರಮೇಶ್.ಬಿ ಉದ್ಘಾಟಿಸಿದರು. ವಿಶ್ವವಿದ್ಯಾನಿಲಯದ ಧ್ವಜಾರೋಹಣದ ಬಳಿಕ ಪಥಸಂಚಲನ ವೀಕ್ಷಿಸಿ ಬಲೂನ್‌ಗಳನ್ನು ಹಾರಿಬಿಡುವ ಮೂಲಕ ಅವರು ಕ್ರೀಡಾಕೂಟಕ್ಕೆ ವಿಧ್ಯುಕ್ತ ಚಾಲನೆ ನೀಡಿದರು.



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಬಿಸಿಯು ಅಥ್ಲೆಟಿಕ್ ಕ್ರೀಡಾಕೂಟಕ್ಕೆ ಕುಲಪತಿ ಪ್ರೊ. ರಮೇಶ್ ಬಿ ಮತ್ತು ಇತರೆ ಗಣ್ಯರು ತ್ರಿವರ್ಣ ಬಲೂನುಗಳನ್ನು ಹಾರಿಬಿಡುವ ಮೂಲಕ ಚಾಲನೆ ನೀಡಿದರು.

ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಿದ ಕುಲಪತಿಗಳು ಪಠ್ಯಕ್ರಮ ಅಧ್ಯಯನದ ಜೊತೆಗೆ ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ದೈಹಿಕ ಸದೃಢತೆ ಬೆಳೆಸಿಕೊಳ್ಳುವಂತೆ ಉತ್ತೇಜಿಸಿದರು.

ಬಿಸಿಯು ಕುಲಸಚಿವರಾದ ಎ.ನವೀನ್ ಜೋಸೆಫ್, ವಿತ್ತಾಧಿಕಾರಿಗಳಾದ ಎಂ.ವಿ.ವಿ–ಜಯಲಕ್ಷ್ಮಿ, ಸಿಂಡಿಕೇಟ್ ಸದಸ್ಯರಾದ ಡಾ. ಬಿ.ಆರ್. ಸುಪ್ರೀತ್, ಸಮನ್ವಯಾಧಿಕಾರಿ ಮಹಮ್ಮದ್ ಸಿಬ್ಗತುಲ್ಲಾ ಉಪಸ್ಥಿತರಿದ್ದರು. ದೈಹಿಕ ಶಿಕ್ಷಣ ನಿರ್ದೇಶನಾಲಯದ ಪ್ರಭಾರ ನಿರ್ದೇಶಕರಾದ ಡಾ.ಶಿವಶಂಕರ್. ಕೆ. ಪ್ರಾಸ್ತಾವಿಕ ಭಾಷಣ ಮಾಡಿದರು. ಡಾ.ಜಗದೀಶಯ್ಯ ಕಾರ್ಯಕ್ರಮ ನಿರೂಪಿಸಿದರು. ಗಿರೀಶ್ ಎನ್. ಸ್ವಾಗತಿಸಿದರು. ಡಾ.ಶ್ರೀನಿವಾಸಲು ವಂದಿಸಿದರು.

**ಪ್ರಶಸ್ತಿ ಪ್ರದಾನ ಸಮಾರಂಭ**

ಸಮಾರೋಪ ಸಮಾರಂಭದಲ್ಲಿ ಬಿಸಿಯು ದೈಹಿಕ ಶಿಕ್ಷಣ ನಿರ್ದೇಶನಾಲಯದ ಪ್ರಭಾರ ನಿರ್ದೇಶಕರಾದ ಪ್ರೊ.ಕೆ. ಶಿವಶಂಕರ್ ವಿಜೇತರಿಗೆ ಟ್ರೋಫಿ ಮತ್ತು ಬಹುಮಾನಗಳನ್ನು ವಿತ–ರಿಸಿದರು. ಪುರುಷರ ವಿಭಾಗದಲ್ಲಿ ಮಲ್ಲೇಶ್ವರಂನ ಎಂ.ಇ.ಎಸ್. ಕಾಲೇಜಿನ ಡಿ. ಪ್ರತೀಕ್ ಹಾಗೂ ಮಹಿಳೆಯರ ವಿಭಾಗದಲ್ಲಿ ಮೌಂಟ್ ಕಾರ್ಮೆಲ್ ಕಾಲೇಜಿನ ಲೇಖನ ಎಸ್. ಪ್ರಸಾದ್ ಅತ್ಯುತ್ತಮ ಅಥ್ಲೆಟ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

ಅನಿಕೇತನ ಮಾಸಪತ್ರಿಕೆಯನ್ನು ಕೆಳಕಂಡ ಅಂತರ್ಜಾಲ ತಾಣದಲ್ಲಿ ವೀಕ್ಷಿಸಬಹುದಾಗಿದೆ.

**www.bcu.ac.in**




ಪುರುಷರ ವಿಭಾಗದಲ್ಲಿ ಸಮಗ್ರ ಚಾಂಪಿಯನ್‌ಷಿಪ್ ಟ್ರೋಫಿ ಗಳಿಸಿದ ಸೇಂಟ್ ಫ್ರಾನ್ಸಿಸ್ ಕಾಲೇಜಿನ ತಂಡ




ಮಹಿಳಾ ವಿಭಾಗದಲ್ಲಿ ಸಮಗ್ರ ಚಾಂಪಿಯನ್‌ಷಿಪ್ ಟ್ರೋಫಿ ಗಳಿಸಿದ ಮೌಂಟ್ ಕಾರ್ಮೆಲ್ ಕಾಲೇಜಿನ ತಂಡ

# INDIAN HOCKEY TURNS 100

## BCU Catching up the Tradition

-Col. Dhyanchand, MCJ

Over the past 100 years, Indian hockey has achieved great success. The men's team has won eight Olympic gold medals, a World Cup title in 1975, and several medals in the Asian Games, Asia Cup, Asian Champions Trophy, and Sultan Azlan Shah Cup. The women's team has also grown steadily, participating in multiple World Cups and winning the Asian Games in 1982 and the Asia Cup in 2004 and 2017. India is remembering Major Dhyan Chand who helped India win three consecutive Olympic gold medals in 1928 (Amsterdam), 1932 (Los Angeles), and 1936 (Berlin). His contributions to Indian hockey earned him the Padma Bhushan in 1956. India celebrates National Sports Day on his birthday every year. Bengaluru City University (BCU) has shown strong and consistent performances in hockey over the past few years. In 2024–25, BCU won the gold medal at the South Zone Inter-University competition. At the All India Inter-University Games held at Gurukula Kangri University, Haridwar, the team secured bronze, which qualified them for the Khelo India University Games 2025.

BCU's 35-member team took part in various sporting events in the 5th Khelo India University Games held in Rajasthan from 24th Nov. to 5th Dec. -2025. BCU Vice Chancellor Prof. Ramesh B. congragulated the winning teams and athletes.




BCU Hockey team won the broze medal at the 5th Khelo India University Games.

## BCU Shines in Khelo India

In the Khelo India University Games held in Rajasthan, Naisha Shetty, student of Bengaluru City University (St. Joseph commerce college) has won a bunch of silver medals. Excelling in the women's 100m Butterfly, 50m Butterfly, 100m Freestyle, and 100m Backstroke swimming events, Naisha Shetty clinched a total of 4 silver medals.

Meanwhile, the women's Fencing foil team secured bronze medals. (Sameer Anjum- Nagarjuna Degree College, Mahalakshmi S- BMSCM College, Shriraksha I K- SFGC Yelahanka).

## BCU Wrestling Tournament

The Bengaluru City University Inter-College Men's and Women's Wrestling Tournament 2025–26 was successfully organized by RJS Institute of Management Studies, Koramangala, Bengaluru, in association with the Directorate of Physical Education, Bengaluru City University, at the RJSIMS College campus. A total of 300 wrestlers from various colleges affiliated with BCU participated in the tournament.

**Championship Results**

**Men's Freestyle** : Govt. Arts College.

**Women's Freestyle**: R.C. College.

**Men's Greco-Roman** : RJS College.




Women's Freestyle Category Champions : R.C. College

**ಸಂಪಾದಕೀಯ ಮಂಡಳಿ**

**ಡಾ. ಟಿ. ಎನ್. ತಾಂಡವ ಗೌಡ,**
ಸಂವಹನ ವಿಭಾಗ ಮುಖ್ಯಸ್ಥರು.
**ಎಸ್. ಆರ್. ಆರಾಧ್ಯ,**
ಮಾಧ್ಯಮ ಸಮಾಲೋಚಕರು.
**ಡಾ. ಪ್ರವೀಣ ಡಿ.ಎಸ್.**
**ಡಾ. ಮರಿಸ್ವಾಮಿ.**
**ಡಾ. ತೇಜಸ್ವಿನಿ ದೇವಕುಮಾರ್.**
**ಡಾ. ನಂದೀಶ ಎನ್.**
**ಡಾ. ಶ್ರೀನಿವಾಸ್ ಸಿ.ಎನ್.**
**ಸರ್ವಜಿತ್ ಕುಮಾರ್ ಜೆ.ಎನ್.**
(ಪುಟ ವಿನ್ಯಾಸಕರು)
**ಪುನೀತ್ ಡಿ.**
(ತಾಂತ್ರಿಕ ಸಹಾಯಕರು)

**ಮಾರ್ಗದರ್ಶಕ ಮಂಡಳಿ**

**ಪ್ರೊ. ರಮೇಶ್. ಬಿ,**
ಮಾನ್ಯ ಕುಲಪತಿಗಳು.
**ನವೀನ್ ಜೋಸೆಫ್. ಎ,**
ಮಾನ್ಯ ಕುಲಸಚಿವರು.
**ಪ್ರೊ.ರಮೇಶ್.ಬಿ. ಕುಡೇನಟ್ಟಿ**
ಕುಲಸಚಿವರು–ಮೌಲ್ಯಮಾಪನ.
**ಎಂ.ವಿ. ವಿಜಯಲಕ್ಷ್ಮಿ ,**
ಮಾನ್ಯ ವಿತ್ತಾಧಿಕಾರಿಗಳು.
**ಪ್ರೊ. ಕೆ.ಆರ್.ಜಲಜಾ,**
ಡೀನರು, ವಾಣಿಜ್ಯ ನಿಕಾಯ.
**ಪ್ರೊ. ಜ್ಯೋತಿ ವೆಂಕಟೇಶ್,**
ಡೀನರು, ಕಲಾ ನಿಕಾಯ.
**ಪ್ರೊ. ಪಿ. ಆರ್. ಚೇತನ,**
ಡೀನರು, ವಿಜ್ಞಾನ ನಿಕಾಯ.

**ವಿದ್ಯಾರ್ಥಿ ಸಂಪಾದಕರು**

ಪ್ರಶಾಂತ್ ಎಲ್, ಎಂಸಿಜೆ, ದ್ವಿತೀಯ
ನವ್ಯ ಟಿ. ಎಂ., ಎಂಸಿಜೆ, ಪ್ರಥಮ
ವರುಣ್ ಎಸ್., ಎಂಸಿಜೆ, ದ್ವಿತೀಯ

**ತಿಂಗಳ ಬುತ್ತಿ**

**ಡಿ. 6 – ಮಹಾಪರಿನಿರ್ವಾಣ ದಿನ**
**ಡಿ. 22 – ರಾಷ್ಟ್ರೀಯ ಗಣಿತ ದಿನ**
**ಡಿ. 29– ವಿಶ್ವಮಾನವ ದಿನಾಚರಣೆ**

**Printed and Published by The Registrar, Dr Manmohan Singh Bengaluru City University, Jnanajyothi Central College Campus, Ambedkar Veedhi, Bengaluru - 560001**